ಸಿ.ಆರ್. ಎಫ್ ನಲ್ಲಿ ಯಾವ ಶಾಸಕರಿಗೆ ಅನ್ಯಾಯವಾಗಿದೆ, ಅದರ ಬಗ್ಗೆಯೂ ಒಂದು ಪಟ್ಟಿಯನ್ನು ತರಿಸಿದ್ದೇವೆ. ಇದರ ವಿವರಗಳನ್ನೂ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆ. ಅದರ ಪ್ರಕಾರ ನಾನೇನು ಮಾಡಿದ್ದೇನೆಂದರೆ, ಮತ್ತೆ 120 ಕ್ಷೇತ್ರಗಳಿಗೆ ಕೇಂದ್ರ ಸರ್ಕಾರಕ್ಕೆ 40–40 ಲಕ್ಷದಂತೆ ಕಳುಹಿಸಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈಗಾಗಲೇ ಮೂರು ತಿಂಗಳಾಗಿದೆ, ಇನ್ನೂ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಬಂದ ತಕ್ಷಣ ನಾನು ಮಾಡಿಸಿ ಕೊಡುತ್ತೇನೆ. ನನಗೇನು ಅವರದು, ಇವರದು ಎನ್ನುವ ಪ್ರಶ್ನೆ ಇಲ್ಲ ಅದರ ಜೊತೆಗೆ 30–54ರಲ್ಲಿ ಸಾಕಷ್ಟು ಕಡೆಗಳಲ್ಲಿ ಕೊಟ್ಟಿದ್ದೇವೆ. ಎಲ್ಲಾದರೂ ಕೊಟ್ಟಿಲ್ಲದೇ ಹೋದರೆ, ಸರಿಪಡಿಸುವುದಕ್ಕೆ ನಾನು ತಯಾರಿದ್ದೇನೆ. ಇದರ ಒಂದು ಪಟ್ಟಿಯನ್ನು ತಯಾರು ಮಾಡಿ ಎಂದು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಎಲ್ಲಾ ಕ್ಷೇತ್ರಗಳಿಗೂ ಒಂದೇ ಸಾರಿ ಕೊಡುವುದಕ್ಕಾಗುವುದಿಲ್ಲ. ಹಣಕಾಸಿನ ಲಭ್ಯತೆ ಆಧಾರದ ಮೇಲೆ ಕೊಡುವುದಕ್ಕೆ ನಾನು ತಯಾರಿದ್ದೇನೆ. ಇದರ ಜೊತೆಗೆ ಕ್ವಾಲಿಟಿ ವರ್ಕ್ಸ್ ಬಗ್ಗೆ ವಿರೋಧ ಪಕ್ಷದ ಉಪನಾಯಕರಾದ ಕಾರಜೋಳರವರು ಪ್ರಸ್ತಾಪ ಮಾಡಿ, ಕೆಲವು ಕಡೆ ಕ್ವಾಲಿಟಿ ವರ್ಕ್ಸ್ ಸರಿಯಿಲ್ಲವೆಂದು ಹೇಳಿದರು. ಇದು ನನ್ನ ಗಮನಕ್ಕೆ ಬಂದರೆ, ಯಾವ ತರಹ ತನಿಖೆ ಮಾಡಿಸುವುದಕ್ಕೂ ನಾನು ಸಿದ್ಧನಿದ್ದೇನೆ. ನನಗೆ ಯಾರ ಹತ್ತಿರ ಯಾವುದೇ ದಾಕ್ಷಿಣ್ಯ ಇಲ್ಲ. ಖಾಸಗಿ ಕಂಟ್ರಾಕ್ಟರ್ ಆಗಲೀ ಅಥವಾ ಯಾವುದಾದರೂ ಫಾಲ್ಸ್ ಬಿಲ್ ಅಥವಾ ಕ್ವಾಲಿಟಿ ವರ್ಕ್ಸ್ ಇಲ್ಲದೇ ಇದ್ದರೆ, ಅದರ ಬಗ್ಗೆ ತಾವು ಮಾಹಿತಿ ಕೊಟ್ಟರೆ ನಮ್ಮ ಹಿರಿಯ ಅಧಿಕಾರಿಗಳಿಗೆ ಹೇಳಿ, ತನಿಖೆ ಮಾಡಿಸುವುದಕ್ಕೂ ಸಿದ್ಧನಿದ್ದೇನೆಂದು ತಿಳಿಸಿ, ಬಾಕಿ ಕ್ಷೇತ್ರಗಳಲ್ಲಿ ಏನಾದರೂ ಸಣ್ಣಪುಟ್ಟ ರೋಡುಗಳಿದ್ದರೆ, ನಾನು ಮಾಡಿಸಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ವಿಷಯ:ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ ಹಾಗೂ ಕಾಖಾನೆಯ ಜಮೀನನ್ನು ಖಾಸಗಿಯವರಿಗೆ ವಹಿಸುವುದರಿಂದ, ಅಲ್ಲಿನ ನೌಕರರಿಗೆ ಉಂಟಾಗುವ ತೊಂದರೆ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯ್ಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಗಂಧದ ಎಣ್ಣೆ ಕಾರ್ಖಾನೆ ಏನಿದೆ, ಆ ಗಂಧದ ಎಣ್ಣೆ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಬೇಕು ಮತ್ತು ಅಲ್ಲಿರುವ ಜಮೀನನ್ನು ಪರಭಾರೆ ಮಾಡಬೇಕೆಂದು ಸರ್ಕಾರದ ಚಿಂತನೆ ಏನಿದೆ. ಅದರಿಂದ ಅಲ್ಲಿ ಉಂಟಾಗುವ ಅನಾನುಕೂಲತೆಗಳ ಬಗ್ಗೆ ಸನ್ಮಾನ್ಯ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುವುದಕ್ಕೆ ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):–

ಮಾನ್ಯ ಅಧ್ಯಕ್ಷರೆ,

ವಿಧಾನ ಸಭಾ ಸದಸ್ಯರಾದ ಶ್ರೀ ಮಾಧುಸ್ವಾಮಿ ಜೆ.ಸಿ. ಇವರು ನಿಯಮ 73 ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಸಚಿವರ ಹೇಳಿಕೆ.

ವಿಷಯ: ಮೈಸೂರಿನಲ್ಲಿರುವ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸುವ ಹಾಗೂ ಅಲ್ಲಿರುವ ಜಮೀನನ್ನು ಬೇರೆಯವರಿಗೆ ವಹಿಸುವ ಸರ್ಕಾರದ ನಿಲುವಿಗೆ ಮತ್ತು ಈ ತೀರ್ಮಾನದಿಂದ ಅಲ್ಲಿನ ನೌಕರರಿಗೆ ಉಂಟಾಗಬಹುದಾದ ಪರಿಸ್ಥಿತಿಯ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರ ಗಮನ ಸೆಳೆಯಬಯಸುತ್ತೇನೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಮೈಸೂರು ಶ್ರೀಗಂಧದೆಣ್ಣೆ ವಿಭಾಗದಲ್ಲಿ ಹಾಲಿ 77 ಮಂದಿ ಉದ್ಯೋಗಿಗಳಿದ್ದು ಇವರಲ್ಲಿ 56 ಮಂದಿ ಕಾರ್ಮಿಕರ ವರ್ಗ ಹಾಗೂ 21 ಮಂದಿ ಅಧಿಕಾರಿ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಮೈಸೂರು ಶ್ರೀಗಂಧದೆಣ್ಣೆ ವಿಭಾಗದಲ್ಲಿ ಪ್ರಮುಖವಾಗಿ ಗಂಧದ ಎಣ್ಣೆ ಸಂಸ್ಕರಣೆಯನ್ನು ನಡೆಸಲಾಗುತ್ತಿದೆ. 2004–05ರ ಸಾಲಿನಲ್ಲಿ 3798.180ಕೆ.ಜಿ. ಗಂಧದೆಣ್ಣೆಯನ್ನು ಉತ್ಪಾದಿಸಲಾಗಿದೆ. ಈ ಸಾಲಿನ ಗಂಧದೆಣ್ಣೆ ಉತ್ಪಾದನೆಗಾಗಿ 83.125 ಮೆಟ್ರಿಕ್ ಟನ್ ಶ್ರೀಗಂಧದ ಮರವನ್ನು ಖರೀದಿಸಲಾಗಿದೆ. ಈ ಖರೀದಿಗಾಗಿ ರೂ 13.15 ಕೋಟಿ ವೆಚ್ಚವಾಗಿದೆ. 2004–05ನೇ ಸಾಲಿನಲ್ಲಿ ಶ್ರೀಗಂಧದೆಣ್ಣೆ ಉತ್ಪಾದನೆಯಲ್ಲಿ ಸುಮಾರು 13.29 ಕೋಟಿ ವಹಿವಾಟನ್ನು ನಡೆಸಿದೆ. ಇತ್ತೀಚೆಗೆ ಪ್ರಮುಖ ಕಚ್ಚಾವಸ್ತುವಾದ ಶ್ರೀಗಂಧದ ಮರದ ಸರಬರಾಜಿನ ಕೊರತೆಯಿಂದಾಗಿ ವಿಭಾಗದಲ್ಲಿ ಉತ್ಪಾದನೆ ಕುಂಠಿತವಾಗುತ್ತಿದೆ.

ಸದರಿ ವಿಭಾಗದಲ್ಲಿ ಶ್ರೀಗಂಧದೆಣ್ಣೆ ಉತ್ಪಾದನೆಯ ಜೊತೆ ವಿವಿಧ ಮಾದರಿಯ ಅಗರಬತ್ತಿಗಳನ್ನು ಸಹ ತಯಾರಿಸಲಾಗುತ್ತಿದೆ. 2004–05ನೇ ಸಾಲಿನಲ್ಲಿ 32,500 ಸಿ.ಬಿ ಅಗರಬತ್ತಿ ಉತ್ಪಾದಿಸಲಾಗಿದ್ದು ರೂ. 4.71 ಕೋಟಿ ವಹಿವಾಟು ನಡೆಸಲಾಗಿದೆ.

ಮೈಸೂರು ಶ್ರೀಗಂಧದೆಣ್ಣೆ ಕಾರ್ಖಾನೆಯ ಪ್ರಾರಂಭದಲ್ಲಿ ಒಟ್ಟು 55.89 ಎಕರೆ ವಿಸ್ತೀರ್ಣದ ಜಮೀನನ್ನು ಹೊಂದಿದ್ದು ತದನಂತರ ವಿಲೇವಾರಿಯಾದ ಮತ್ತು ಹಾಲಿ ಇರುವ ಜಮೀನಿನ ವಿವರ ಈ ಕೆಳಕಂಡಂತಿದೆ.

ಕ್ರ.ಸಂ. ವಿವರ ವಿಸ್ತೀರ್ಣ(ಎಕರೆಗಳಲ್ಲಿ)

1. ಮೈಸೂರಿನ ಎನ್.ಐ.ಇ. ವಿದ್ಯಾಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಜಮೀನು 1.82 ಎಕರೆ

2. ಕೆ.ಎಸ್.ಡಿ.ಎಲ್. ಸಂಸ್ಥೆಯು ಕರ್ನಾಟಕ ಸರ್ಕಾರದ ಅರಣ್ಯ ಇಲಾಖೆಗೆ ನೀಡಬೇಕಾದ್ದ ರೂ 485 ಲಕ್ಷ ರೂಪಾಯಿಗಳಿಗೆ ಸರ್ಕಾರಿ ಆದೇಶ ದಿ. 24-5-2003ರ ಅನ್ವಯ ಕರ್ನಾಟಕ ಅರಣ್ಯ ಇಲಾಖೆಗೆ ವಹಿಸಿಕೊಟ್ಟಿರುವ ಜಮೀನು 21 ಎಕರೆ

3. ಮೈಸೂರು ಶ್ರೀ ಗಂಧದೆಣ್ಣೆ ವಿಭಾಗದ ವಶದಲ್ಲಿರುವ ಹಾಲಿ ಒಟ್ಟು ಜಮೀನು 33.07 ಎಕರೆ

ಕರ್ನಾಟಕ ಅರಣ್ಯ ಇಲಾಖೆಗೆ ಕಂಪನಿಯು 21 ಎಕರೆ ಜಮೀನನ್ನು ವಹಿಸಿಕೊಟ್ಟಿರುವ ಸಂಬಂಧ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶ ಸಂಖ್ಯೆ: ಆಪಜೀ 107 ಎಫ್.ಎಸ್. ಡಬ್ಲೂಯು 93 ಬೆಂಗಳೂರು ದಿನಾಂಕ:24-5-2003ರಲ್ಲಿ ಈ ಕೆಳಕಂಡ ಷರತ್ತಿಗೆ ಒಳಪಟ್ಟಂತೆ ಒಪ್ಪಿಗೆ ನೀಡಿರುತ್ತದೆ.

ಸದರಿ ಜಾಗದಲ್ಲಿ ಕಾರ್ಖಾನೆಯ ನೌಕರರ ವಸತಿ ಗೃಹಗಳಿದ್ದು ಅವುಗಳನ್ನು ಅವರ ನಿವೃತ್ತಿ ಅಥವಾ ಅವರು ಸ್ವಯಂ ಬಿಟ್ಟುಕೊಡುವವರೆಗೂ ಬಿಡಲು (Which ever is earlier) ಅರಣ್ಯ ಇಲಾಖೆಯವರು ಒತ್ತಾಯ ಮಾಡುವಂತಿಲ್ಲ. ಹಾಗೂ ಆ ವಸತಿ ಗೃಹವಾಸಿಗಳ ಭದ್ರತೆ ಮತ್ತು ನಿರ್ವಹಣೆ ಅರಣ್ಯ ಇಲಾಖೆಯವರು ನೋಡಿಕೊಳ್ಳತಕ್ಕದ್ದು.

ಮೈಸೂರು ಶ್ರೀಗಂಧದೆಣ್ಣೆ ಕಾರ್ಖಾನೆಯಲ್ಲಿ ಉದ್ಯೋಗಿಗಳ ವಾಸಕ್ಕೆ 70 ವಸತಿ ಗೃಹಗಳನ್ನು ನಿರ್ಮಿಸಲಾಗಿದೆ. ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯ ಸ್ವಾಧೀನಕ್ಕೆ ಒಳಪಟ್ಟಿರುವ 21 ಎಕರೆ ಜಮೀನಿನ ವ್ಯಾಪ್ತಿಯಲ್ಲಿ ಕಂಪನಿಯ 48 ವಸತಿ ಗೃಹಗಳು ಸೇರಿದ್ದು, ಇವುಗಳಲ್ಲಿ 30 ವಸತಿ ಗೃಹಗಳಲ್ಲಿ ಕಾರ್ಖಾನೆಯ ಉದ್ಯೋಗಿಗಳು ವಾಸವಾಗಿದ್ದಾರೆ. ಇನ್ನುಳಿದ 18 ವಸತಿಗೃಹಗಳು ಖಾಲಿ ಇರುತ್ತವೆ.

ಈ ಸಂಸ್ಥೆಯ ಖಾಸಗೀಕರಣ ವಿಷಯದ ಬಗ್ಗೆ ತೀರ್ಮಾನ ಕೈಗೊಳ್ಳಲು ಪ್ರಸ್ತಾವನೆಯನ್ನು ಸಚಿವ ಸಂಪುಟ ಉಪಸಮಿತಿಯ ಮುಂದೆ ಮಂಡಿಸಲಾಗಿದೆ. ಇದೂವರೆವಿಗೂ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿರುವುದಿಲ್ಲ.

ಶ್ರೀ ಎಂ.ಕೆ. ನಾಗಮಣಿ: (ಕಿರುಗಾವಲು) ಮಾನ್ಯ ಅಧ್ಯಕ್ಷರೇ, ಈ ಸಾಬೂನು ಕಾರ್ಖಾನೆಯ ಒಂದು ವಿಭಾಗದ ಈ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಈ ಸ್ಥಿತಿ ಬರುವುದಕ್ಕೆ ಮುಖ್ಯವಾದ ಕಾರಣ ಗಂಧದ ಮರದ ಕೊರತೆ ಎಂದು ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. 1997ರವರೆಗೂ ಸರ್ಕಾರ ಒಂದು ಟನ್ ಗಂಧದ ಮರಕ್ಕೆ 1 ಲಕ್ಷ 44 ಸಾವಿರ ಬೆಲೆಯಲ್ಲಿ ಸರ್ಕಾರ ಸರಬರಾಜು ಮಾಡುತ್ತಿತ್ತು. ಆ ನಂತರದ ದಿನಗಳಲ್ಲಿ ಗಂಧದ ಮರದ ಕೊರತೆ ಯಿಂದಾಗಿ ಹರಾಜಿನಲ್ಲಿ ಕಾರ್ಖಾನೆಗೆ ಗಂಧದ ಮರವನ್ನು ತರುತ್ತಿದ್ದಾರೆ. ಈಗ ಏನು ಬೆಲೆ ದುಬಾರಿಯಾಗುತ್ತದೆ ಕಾರ್ಖಾನೆಗೆ ಅಂದರೆ 1997ರ ನಂತರ ಮರ ತರಬೇಕಾದರೆ ಒಂದು ಟನ್‌ಗೆ 17 ಲಕ್ಷದಿಂದ 18 ಲಕ್ಷದವರೆಗೂ ದುಬಾರಿ ಬೆಲೆಯನ್ನು ತೆರಬೇಕಾಗಿತ್ತು. ಅದು ಈಗಿನ ದಿನದಲ್ಲಿ ಮತ್ತೂ ದುಬಾರಿ ಯಾಗಿ 23 ಲಕ್ಷದವರೆಗೆ ಏರಿದೆ. ಈ ದಿನ ಹರಾಜಿಗೆ ಹೋದಂತಹ ಅಧಿಕಾರಿ ವರ್ಗದವರು 27 ಲಕ್ಷದವರೆಗೂ ಹರಾಜು ಕೂಗಿ ತರಲಿಕ್ಕೇ ಆಗದೇ ವಾಪಸ್ಸು ಬಂದಿರುವ ಸ್ಥಿತಿ ಕೂಡ ಇದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಗಮನಹರಿಸಿ ಮಾನ್ಯ ಅಧ್ಯಕ್ಷರೇ ಅರಣ್ಯ ಇಲಾಖೆಯಲ್ಲಿರುವಂತಹ ಗಂಧದ ಮರವನ್ನು ಕಾರ್ಖಾನೆಗೆ ಒದಗಿಸಿ ಕೊಟ್ಟರೆ ಸುಮಾರು 10 ವರ್ಷದವರೆಗೆ ಸುಲಲಿತವಾಗಿ ಕಾರ್ಖಾನೆ ನಡೆದುಕೊಂಡು ಹೋಗಬಹುದು ಮತ್ತೆ ಅಲ್ಲಿರು ವಂತಹ ಕಾರ್ಮಿಕರಿಗೂ ಕೂಡ ಈ ಕಾರ್ಖಾನೆ ನಡೆದರೆ ಬೀದಿ ಪಾಲಾಗುವುದು ಕೂಡ ತಪ್ಪುತ್ತದೆ. ಮತ್ತು ಇಲ್ಲಿ ತಯಾರು ಮಾಡುತ್ತಿರುವಂತಹ ಅಗರಬತ್ತಿ ಘಟಕದಲ್ಲಿ ಬಡ ಹೆಣ್ಣು ಮಕ್ಕಳು ಅದರಲ್ಲೂ ಗ್ರಾಮೀಣ ಪ್ರದೇಶದಿಂದ ಬಂದಿರುವ ಹೆಣ್ಣು ಮಕ್ಕಳು ಕೆಲಸ ಮಾಡುತ್ತಿದ್ದಾರೆ, ಅದೂ ದಿನಗೂಲಿ ನೌಕರರಾಗಿ. ಈ ಕಾರ್ಖಾನೆ ಖಾಸಗೀಕರಣಗೊಂಡರೆ ಅಲ್ಲಿರುವಂತಹ ನೌಕರರೆಲ್ಲ ಬೀದಿ ಪಾಲಾಗು ವಂತಹ ಸ್ಥಿತಿ ಬರಬಹುದು ಮತ್ತೆ ಆ ಹೆಣ್ಣು ಮಕ್ಕಳು ಕೂಡ ಬಹಳ ದುಸ್ಥಿತಿಗೆ ಒಳಗಾಗುತ್ತಾರೆ. ಆದ್ದರಿಂದ ಸರ್ಕಾರದವರು ಗಮನಹರಿಸಿ ನಮ್ಮ ಮೈಸೂರಿನ ಪರಂಪರೆಯ ಇತಿಹಾಸವುಳ್ಳ ಈ ಕಾರ್ಖಾನೆಯನ್ನು ಖಾಸಗೀ ಕರಣಗೊಳಿಸದೆ ನಮ್ಮ ಸರ್ಕಾರದ ಹಿಡಿತದಲ್ಲೇ ಇಟ್ಟುಕೊಳ್ಳಬೇಕು ಅಂತ ತಮ್ಮ ಮುಖಾಂತರ ನಾನು ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಇಚ್ಚಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದು ಇನ್ನೂ ಉಪಸಮಿತಿ ಮುಂದೆ ಇದೆ ಅದು ಇನ್ನೂ ಇತ್ಯರ್ಥವಾಗಿಲ್ಲ ಖಾಸಗೀಕರಣಗೊಳಿಸುವುದು ಅಂತ ಹೇಳಿ, ನನಗೆ ಗೊತ್ತು ಮಾನ್ಯ ಸಿಂಧ್ಯಾರವರ ಅಭಿಪ್ರಾಯ ಯಾವುದೇ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದರ ಕಡೆ ಅವರಿಗೆ ಅಷ್ಟು ಆಸಕ್ತಿ ಇಲ್ಲ. ಅದರಲ್ಲೂ

ಈ ಸಂಸ್ಥೆ ಏನಿದೆ ಮೈಸೂರಿನ ಹೃದಯ ಕೇಂದ್ರದಲ್ಲಿದೆ. ಮತ್ತೆ ಮೈಸೂರು ತಮಗೆ ಗೊತ್ತು ಇವತ್ತು ಅಗರಬತ್ತಿ ಉದ್ದಿಮೆಗೆ ಬಹಳ ಹೆಸರುವಾಸಿಯಾದಂತಹ ಊರು ಮೈಸೂರು ನಗರ. ಇದರ ಮೂಲಕ ನಿಮ್ಮ ಎಲ್ಲಾ ಸೈಕಲ್ ಬ್ರ್ಯಾಂಡ್ ನಿಂದ ಹಿಡಿದು ಎಲ್ಲಾ ಗಂಧದ ಕಡ್ಡಿ ಫ್ಯಾಕ್ಟರಿಗಳು, ಊದಬತ್ತಿ ಫ್ಯಾಕ್ಟರಿಗಳು ಮೈಸೂರಿನಲ್ಲಿ ಚೇತರಿಸಿಕೊಳ್ಳುವುದಕ್ಕೆ ಆಯಿತು. ಒಂದೇ ಒಂದು ತೊಂದರೆಯಾಗಿರುವುದು ಮಾನ್ಯ ಅಧ್ಯಕ್ಷರೆ ನೀವು ಇವತ್ತು ಗಂಧವನ್ನು ಹರಾಜಿನಲ್ಲಿ ತನ್ನಿ ಎಂದು ಹೇಳಿ ನಿಗದಿ ಮಾಡಿರುವುದು, ರಾಜ್ಯದಲ್ಲಿ ಹೇರಳವಾಗಿ ಗಂಧವನ್ನು ನಮ್ಮ ಭಾಗದಲ್ಲಿ ಎಲ್ಲಾ ಬೆಳೆಯುತ್ತಿದ್ದೆವು, ಸುಮಾರು ಗಂಧ ಕಳ್ಳ ಸಾಗಾಣಿಕೆಯಾಗಿ ತಮಿಳುನಾಡಿಗೆ ಹೋಗುತ್ತಿದೆ. ಆಗಲೂ ಕೂಡ ರೇಟ್ ಫಿಕ್ಸ್ ಮಾಡಬೇಕಾದರೆ ಸಲಹೆ ಕೊಡಿ, ರೈತರಿಗೆ ಕೊಡಿ ಅವರೇ ರೇಟ್ ಫಿಕ್ಸ್ ಮಾಡಿಕೊಳ್ಳಲಿ ಎಂದಾಗ ಬಹಳ ಲೇಟಾಗಿ ನೀವು ಕೊಟ್ಟಿದ್ದರಿಂದ ಏನು ಖಾಸಗೀ ಜಮೀನಿನಲ್ಲಿ ಇದ್ದ ಗಂಧ ಇತ್ತು ಅದೂ ಕೂಡ ಸಪ್ಲೈ ಮಾಡಲಿಕ್ಕೆ ಆಗಲಿಲ್ಲ. ಈಗ ನೀವು ನಿಮ್ಮ ಫಾರೆಸ್ಟ್ ನಲ್ಲಿರುವ ಗಂಧ ಆದರೂ ಈ ಫ್ಯಾಕ್ಟರಿಗೆ ಕೊಟ್ಟು ತಾವು ಈಗ ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ ಅಲ್ಲಿರುವ ನೌಕರರು ಅವರಾಗಿಯೇ ನಿವೃತ್ತಿಯಾಗುವವರೆಗೆ ಅಥವಾ ಅವರು ಸ್ವಯಂ ನಿವೃತ್ತಿಯಾಗುವವರೆಗೂ ಅವರನ್ನು ಅಲ್ಲಿಂದ ಜಾಗ ಖಾಲಿ ಮಾಡಿಸುವುದಿಲ್ಲ ಅಂತ. ಅಲ್ಲಿಯವರೆಗೂ ಈ ಫ್ಯಾಕ್ಟರಿಯನ್ನು ನಡೆಸುವುದಕ್ಕೆ ಸರ್ಕಾರ ಏನಾದರೂ ಸಬ್ ಸ್ಟೇಜ್ ಮಾಡುತ್ತೀರಾ? ಫಾರೆಸ್ಟ್ ನಲ್ಲಿರುವ ಗಂಧವನ್ನು ಅವರಿಗೆ ಏನಾದರೂ ಸರ್ಕಾರದ ಖೋಟಾದಲ್ಲಿ ಇಷ್ಟು ಅಂತ ನಿಗದಿ ಮಾಡಿಕೊಟ್ಟು ಅಷ್ಟೊಂದು ಉದ್ದಿಮೆಯನ್ನು ಉಳಿಸುತ್ತೀರಾ? ಎರಡನೆಯದಾಗಿ ಈ ಜಮೀನು ಇದೆಯಲ್ಲ ಪ್ಲೇ ಗ್ರೌಂಡ್ ಮಕ್ಕಳು ಆಟಕ್ಕೆ ಉಪಯೋಗಿಸುತ್ತಿದ್ದರು, ಈ ಗ್ರೌಂಡ್ ಎಲ್ಲಾ ನೀವು ಫಾರೆಸ್ಟ್ ಗೆ ಕೊಟ್ಟುಬಿಟ್ಟೀದ್ದೀರಿ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನೀಯರಿಂಗ್ ಗೆ ಭೂಮಿ ಕೊರತೆ ಇರಲಿಲ್ಲ. ಸಾರ್ ನಾನು ಮೈಸೂರಿನಲ್ಲಿ ಓದಿದವನು. ಏನೋ ಇವತ್ತು ಸುಮ್ಮ ಸುಮ್ಮನೇ ಆ ಜಮೀನಿನ ಮೇಲೆ ಅಪೇಕ್ಷೆ ಇಟ್ಟುಕೊಂಡು ಜಮೀನನ್ನು ಕೇಳುತ್ತಿದ್ದಾರೆ, ತಾವು ಎರಡು ಎಕರೆಯಷ್ಟು ಕೊಟ್ಟಿದ್ದೀರಿ ಇನ್ನೂ 9 ಎಕರೆಯನ್ನು ಅವರು ನಿರೀಕ್ಷೆ ಮಾಡುತ್ತಿದ್ದಾರೆ. ಅಲ್ಲೇನು ಭೀತಿ ನಿರ್ಮಾಣ ಆಗಿದೆ 20 ಎಕರೆಯನ್ನು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನೀಯರಿಂಗ್‌ಗೆ ಹ್ಯಾಂಡ್ ಒವರ್ ಆಗಬಹುದು ಈ ಜಮೀನು ಅಂತ ಹೇಳಿ. ಅದನ್ನು ತಾವು ತಪ್ಪಿಸಬೇಕು. ಈ ಸಂಸ್ಥೆಯನ್ನು ಹೇಗಾದರೂ ಮಾಡಿ ಬಹಳ ದಿವಸ ಉಳಿಸಿದ್ದರೂ ಆ ನೌಕರರು ಇರುವ ದಿವಸದವರೆಗೂ ಆದರೂ ಉಳಿಸಿಬಿಟ್ಟು ಗಂಧಕ್ಕೆ ಏನು ಮೈಸೂರು ಹೆಸರಾಗಿತ್ತು, ಅದಕ್ಕೆ ಪೂರಕವಾಗಿ ಒಂದು ಸಂಸ್ಥೆಯನ್ನು ಪುನರ್ ಚೇತನ ಮಾಡಿ ನಡೆಸಿಕೊಂಡು ಹೋಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ.ಪಿ.ಜಿ.ಆರ್. ಸಿಂಧ್ಯಾ:- (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಮಾನ್ಯ ಅಧ್ಯಕ್ಷರೇ, ಈಗ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ಗೆ ಕೊಟ್ಟಿರತಕ್ಕಂತದ್ದು ಗುತ್ತಿಗೆ ಆಧಾರದ ಮೇಲೆ ಕೇವಲ 1 ಎಕರೆ 28 ಗುಂಟೆ ಜಮೀನು ಅಷ್ಟೆ ಇನ್ನು ಯಾವುದೇ ಪ್ರಸ್ತಾವನೆ ನಾನು ಕೈಗಾರಿಕಾ ಸಚಿವನಾದ ಮೇಲೆ ನಮ್ಮ ಇಲಾಖೆ ಮುಂದೆ ಬಂದಿಲ್ಲ. ಇದನ್ನು ಖಾಸಗೀಯವರಿಗೆ ಮಾರಾಟ ಮಾಡತಕ್ಕಂಥಾದ್ದು ಆಗಲಿ, ಅಥವಾ ಎನ್ ಐ ಇ ಯವರಿಗೆ ಕೊಡತಕ್ಕಂಥಾದ್ದು ಆಗಲಿ, ಯಾವುದೇ ರೀತಿಯ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿಲ್ಲ. ನಾನು ಒಪ್ಪುತ್ತೇನೆ ಮಾನ್ಯ ಮಾಧು ಸ್ವಾಮಿಯವರು ಮತ್ತೆ ಶ್ರೀಮತಿ. ಎಂ.ಕೆ. ನಾಗಮಣಿಯವರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ನಾನು ಒಪ್ಪುತ್ತೇನೆ. ಕರ್ನಾಟಕದ ಹಿರಿಮೆ ನಮ್ಮ ಮೈಸೂರು ಸ್ಯಾಂಡಲ್ ಸೋಪ್ ಇದೆ. ಇದಕ್ಕೆ ಒಂದು ಹೆಸರು ಇದೆ ಇದಕ್ಕೆ ಒಂದು ಬ್ರ್ಯಾಂಡ್ ಇದೆ. ಮೊನ್ನೆ ದುಬಾಯಿಯಿಂದ ಯಾರೋ ಒಬ್ಬರು ಬಂದಿದ್ದರು, ಅವರೂ ಸಹ ಈ ಮೈಸೂರು ಸೋಪ್ ಗೆ ನಮಗೆ ಏಜೆಂಟ್ ಆಗಿ ಅಪಾಯಿಂಟ್ ಮೆಂಟ್ ಮಾಡಿ ಯು.ಎ.ಐ. ಕಂಟ್ರೀಸ್ ಗೆ ಅಂತ ಹೇಳಿ ಕೇಳಿದರು. ಅದೇ ರೀತಿ ಅಮೇರಿಕಾದಲ್ಲೂ ಸಹ ನಮ್ ಆರತಿ ಕೃಷ್ಣ ಅಂತ ಹೇಳಿ ನಮ್ಮ ರಾಜ್ಯದ ಒಬ್ಬ ಮಹಿಳೆ, ಅವರ ತಂದೆಯವರು ಇಲ್ಲಿ ಮಂತ್ರಿಗಳಾಗಿದ್ದರು, ಬೇಗಾನೆ ರಾಮಯ್ಯನವರು ಅವರು ಸಹ ನನಗೆ ಭೇಟಿ ಮಾಡಿದರು. ನನಗೆ ಅಮೇರಿಕಾದಲ್ಲಿ ಇದರ ಗುತ್ತಿಗೆಯನ್ನು ಎಲ್ಲಾ ನನಗೆ ಕೊಡಬೇಕು ಅಂತ ಕೇಳಿದರು. ನಾವು ಮೊನಪೋಲಿ ಕೊಡುವುದಕ್ಕಾಗುವುದಿಲ್ಲ ನಿಮ್ಮನ್ನು ಸಹ ಒಬ್ಬರು ಏಜೆಂಟ್ ಆಗಿ ಅಪಾಯಿಂಟ್ ಮೆಂಟ್ ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ ಎನ್ನತಕ್ಕಂತ ಮಾತನ್ನು ಹೇಳಿದ್ದೇನೆ. ಕಾರ್ಮಿಕರ ಹಿತವನ್ನು ಕಾಪಾಡ ತಕ್ಕಂಥದ್ದು ಬಹಳ ಪ್ರಮುಖವಾಗಿರತಕ್ಕಂತ ಒಂದು ಅಂಶ. ಅದರ ಜೊತೆಗೆ ಸಾರ್ವಜನಿಕ ವಲಯದಲ್ಲಿರತಕ್ಕ ಉದ್ದಿಮೆಗಳನ್ನು ಉಳಿಸಿಕೊಳ್ಳತಕ್ಕಂಥಾದ್ದು ಅದರಲ್ಲೂ ಇಂತಹ ಉದ್ದಿಮೆಗಳು ಅದು ವಿಶೇಷವಾಗಿ ನಮ್ಮ ರಾಜ್ಯದ ಪ್ರತಿಷ್ಟೆ, ನಮ್ಮ ರಾಜ್ಯದ ಸಂಸ್ಕೃತಿ, ಮತ್ತು ನಮ್ಮ ರಾಜ್ಯಕ್ಕೆ ಒಂದು ಹೆಸರು ಅಂತ ಹೇಳಿದರೆ ಈ ಗಂಧದ ಎಣ್ಣೆ ಫ್ಯಾಕ್ಟರಿ ಮತ್ತು ಸೋಪು ಇದನ್ನು ಉಳಿಸಿಕೊಳ್ಳಬೇಕು. ಶಿವಮೊಗ್ಗದಲ್ಲೂ ಆಸ್ತಿ ಇದೆ ಮೈಸೂರಿನಲ್ಲೂ ಆಸ್ತಿ ಇದೆ, ಬೆಂಗಳೂರಿನಲ್ಲೂ ಆಸ್ತಿ ಇದೆ.ಮೈಸೂರಿನಲ್ಲಿ ಆಸ್ತಿ ಇದೆ. ಬೆಂಗಳೂರಿನಲ್ಲೂ ಆಸ್ತಿ ಇದೆ. ಈ ಆಸ್ತಿಗಳ ಮೇಲೆ ಕಣ್ಣೀರತಕ್ಕಂಥದ್ದು ಸಹ ನನ್ನ ಗಮನಕ್ಕೆ ಬಂದಿದೆ. ಯಾವುದೇ ಕಾರಣದಿಂದಲೂ ಸಹ ಈ ಆಸ್ತಿಯನ್ನು ಆ ರೀತಿ ನಾವು ಬಿಟ್ಟುಕೊಡುವುದಕ್ಕೆ ನಮ್ಮ ಸಮ್ಮಿಶ್ರ ಸರ್ಕಾರ ಅವಕಾಶ ಕೊಡುವುದಿಲ್ಲ. ಇದು ಮೊದಲನೆಯದು.

ಎರಡನೆಯದಾಗಿ ಇದನ್ನು ಸರ್ಕಾರದ ಹಿಡಿತದಲ್ಲಿಯೇ ಇಟ್ಟುಕೊಂಡು ಯಾವ ರೀತಿ ಇದನ್ನು ಪುನರ್ ಜೀವನಗೊಳಿಸಬಹುದು ಎನ್ನುವ ಬಗ್ಗೆ ನಾನು ಮತ್ತು ಸಚಿವ ಸಂಪುಟದಲ್ಲಿ ನಮ್ಮ ಕಂದಾಯ ಮಂತ್ರಿಗಳಾದ ಮಾನ್ಯ ಪ್ರಕಾಶ್ ರವರು ಇದ್ದರೆ, ನಮ್ಮ ಕಾರ್ಮಿಕ ಇಲಾಖೆಯ ಮಂತ್ರಿಗಳೂ ಸಹ ಇದ್ದಾರೆ. ಹಿಂದಿನ ಕೈಗಾರಿಕಾ ಸಚಿವರು ಸಹ ಆ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಇದ್ದಾರೆ. ನಾವು ಕುಳಿತುಕೊಂಡು ಇದನ್ನು ಮುಚ್ಚದೆ ಯಾವ ಯಾವ ರೀತಿಯಲ್ಲಿ ಇವುಗಳಿಗೆ ಜೀವ ಕೊಡಬಹುದು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಅದು ಮೈಸೂರು ಲ್ಯಾಂಪ್ಸ್ ಇರಬಹುದು, ಇನ್ನು ಇತರೆ 10–12 ಫ್ಯಾಕ್ಟರಿಗಳು ಇವೆ. ಇನ್ ಕ್ಲೂಡಿಂಗ್ ಎನ್ ಜಿ ಈ ಎಫ್ ನಿಮಗೆ ಹೇಳಬೇಕು ಅಂದರೆ, ಯಾವ ರೀತಿ ಇದನ್ನು ಪುನರ್ ಚೇತನಗೊಳಿಬೇಕು, ಬಹಳ ಪ್ರಮುಖವಾಗಿ ನಮ್ಮ ಕಣ್ಣು ಮುಂದೆ ಇರುವುದು ಅಂದರೆ ಎಂಪಿ.ಎಂ, ಇದನ್ನು ಹೇಗೆ ಬದುಕಿಸಬೇಕು ನಾವು ಎನ್ನುವುದರ ಬಗ್ಗೆ ನಾವು ಒಂದು ಸ್ಟ್ಯಾಟಜಿ ಮಾಡಿಕೊಂಡು ಬಹುಶಃ ಅಧಿವೇಶನದ ನಂತರ ನಾವು ಒಂದೆರಡು ಸಭೆ ಮಾಡಿ ಅದನ್ನು ತೀರ್ಮಾನ ಮಾಡುತ್ತೇವೆ. ತಾವು ತಿಳಿದುಕೊಂಡಿರುವ ಹಾಗೆ ಈ ಗಂಧ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆಯಾಗಿದೆ. ದೌಭಾಗ್ಯದ ಸಂಗತಿ ಅದು. ಕರ್ನಾಟಕ ತಮಿಳುನಾಡಿನಲ್ಲಿ ಮಾತ್ರ ಗಂಧವನ್ನು ಬೆಳೆಯುವುದಕ್ಕೆ ಸಾಧ್ಯವಾಗುವಂತದ್ದು, ಬೇರೆ ರಾಜ್ಯಗಳಲ್ಲಿ ಇಲ್ಲ ಎಂದು ನನಗೆ ತಜ್ಞರು ಕೊಟ್ಟಿರತಕ್ಕಂಥ ಒಂದು ವರದಿ. ಈಗ ಗಂಧದ ಎಣ್ಣೆ ಫ್ಯಾಕ್ಟರಿಗೂ ಗಂಧ ಬೇಕು ನಡೆಸಬೇಕಾದರೆ ಅದರ ಜೊತೆಗೆ ನಮ್ಮ ಸಾಗರ, ಸೊರಬದಲ್ಲಿ ಚೆನ್ನಪಟ್ಟಣ ದಲ್ಲಿರತಕ್ಕ ಅನೇಕ ನಮ್ಮ ಕುಶಲಕರ್ಮಿಗಳು ಗಂಧವನ್ನು ಬಹಳ ಬೇಡುತ್ತಿದ್ದಾರೆ. ಸಾವಿರಾರು ಜನ ಇದನ್ನು ಅವಲಂಬಿಸಿಕೊಂಡಿರತಕ್ಕಂತ ಜನ ಇದ್ದಾರೆ.

ನಮಗೆ ಗಂಧ ಕೊಡಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಕೆ.ಹೆಚ್. ರಂಗನಾಥ್ ರವರು ಒಂದು ಒಳ್ಳೆಯ ಕೆಲಸವನ್ನು ಮಾಡಿದರು, ಹಿಂದಿನ ಸರ್ಕಾರದಲ್ಲಿ ಅರಣ್ಯ ಮಂತ್ರಿಗಳಾಗಿದ್ದಾಗ, ರೈತರು ಗಂಧವನ್ನು ಬೆಳೆದರೆ, ಅದರ ಓನರ್ ಶಿಪ್ ರೈಟ್ ಅವರಿಗೆ ಕೊಡುತ್ತೆ ಎಂದು ಕಾನೂನನ್ನು ಸಡಿಲಗೊಳಿಸಿದರು, ಆದರು ಕೂಡ ಅದರಿಂದ ಅಂತಹ ಪರಿಣಾಮಕಾರಿಯಾಗಿ ನಮ್ಮ ರೈತರು ಗಂಧವನ್ನು ಬೆಳೆಯತಕ್ಕಂಥ ಸ್ಥಿತಿಗೆ ತಲುಪಿಲ್ಲ, ಅದರ ಬಗ್ಗೆ ಪರಿಜ್ಞಾನ ಹೆಚ್ಚಾಗಬೇಕಾಗುತ್ತದೆ ಎನ್ನುವುದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಗಂಧವನ್ನು ಕಮರ್ಷಿಯಲಿ ಪರ್ಪಸ್ ಗೆ ಅದು ನಮ್ಮ ಕರಕುಶಲಕರ್ಮಿಗಳಿರಲಿ, ಕಲಾಕಾರರು ಇರಲಿ ಅಥವಾ ಈ ಗಂಧದ ಎಣ್ಣೆ ಕಾರ್ಖಾನೆ ಇರಲಿ, ಸಬ್ಸಿಡಿ ಮಾಡುವುದು ಸರ್ಕಾರಕ್ಕೆ ಕಷ್ಟವಾಗುತ್ತಿದೆ ಅದರಿಂದ ಪರ್ಯಾಯವಾಗಿ ನಮ್ಮ

ಕರಕುಶಲಕರ್ಮಿಗಳು ಈ ಶಿವಾನಿ ವುಡ್ ಏನಿದೆ ಅದನ್ನು ಪರ್ಯಾಯವಾಗಿ ಕೊಡತಕ್ಕಂಥದ್ದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಗಂಧದ ಎಣ್ಣೆ ಕಾರ್ಖಾನೆಗೆ ಬೇಕಾದಷ್ಟು ಗಂಧವನ್ನು ಬೇರೆ ವಿದೇಶಗಳಿಂದ ಕಡಿಮೆ ಬೆಲೆಯಲ್ಲಿ ತರಿಸಿಕೊಳ್ಳುವುದಕ್ಕೆ ಸಾಧ್ಯವೆ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ದುರಾದೃಷ್ಟವಶಾತ್ ವಿದೇಶದಿಂದ ಬರತಕ್ಕಂಥ ಗಂಧ ಈ ಗುಣಮಟ್ಟದ್ದು ಇರುವುದಿಲ್ಲವೆನ್ನುವುದನ್ನು ಕೂಡ ನಾನು ತಿಳಿಯಲ್ಪಟ್ಟಿದ್ದೇನೆ. ಇದನ್ನು ಹೇಗೆ ಹೆಚ್ಚಿಗೆ ಮಾಡಬೇಕೆನ್ನುವುದನ್ನು ನಾನು ಮತ್ತು ಅರಣ್ಯ ಮಂತ್ರಿಗಳು ಕುಳಿತುಕೊಂಡು ಚರ್ಚೆ ಮಾಡಿ ಹೆಚ್ಚಿಗೆ ಗಂಧವನ್ನು ಕಡಿಮೆ ಬೆಲೆಗೆ ಕೊಡಲು ಸಾಧ್ಯವೆ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ. ಒಂದು ಉತ್ತಮವಾದ ಸಲಹೆಯನ್ನು ಶ್ರೀ ಮಾಧುಸ್ವಾಮಿ ಹಾಗೂ ನಾಗಮಣಿಯವರು ಕೊಟ್ಟಿದ್ದಾರೆ. ಈ ಅಗರಬತ್ತಿ ಉತ್ಪಾದನೆಯನ್ನು ಅಲ್ಲಿ ಹೆಚ್ಚು ಮಾಡಿದರೆ ಅಲ್ಲಿರತಕ್ಕಂತಹ ಕಾರ್ಮಿಕರಿಗೆ ಅನುಕೂಲವಾಗುತ್ತದೆನ್ನುವ ವಿಚಾರವನ್ನು ಹೇಳುತ್ತಿದ್ದೀರಿ, ನಮ್ಮ ರಾಜ್ಯದಲ್ಲಿ ಏನು ಈ ಟೈನಿ ಇಂಡಸ್ಟ್ರೀಸ್ ಇದ್ದಾವೆ, ಅಂದರೆ ಅತೀ ಸಣ್ಣ ಕೈಗಾರಿಕೆಗಳ ಪೈಕಿ ಸುಮಾರು 200 ಕೋಟಿ ರೂಪಾಯಿಯಷ್ಟು ನಮ್ಮ ಅಗರಬತ್ತಿಗಳನ್ನು ಹೊರದೇಶಕ್ಕೆ ಕಳುಹಿಸುವ ಕೆಲಸವನ್ನು ಸುಮಾರು 3 ಲಕ್ಷ ಕಾರ್ಮಿಕರು ನಮ್ಮ ರಾಜ್ಯದಲ್ಲಿ ಮಾಡುತ್ತಿದ್ದಾರೆ, ಅವರ ಹಿತವನ್ನು ಕೂಡ ನಾವು ಕಾಪಾಡುವ ದೃಷ್ಟಿಯಿಂದಾಗಿ ಮತ್ತೆ ಶಿವಮೊಗ್ಗದಲ್ಲಿ ಇವರದೊಂದು ಕಾರ್ಖಾನೆ ಇದೆ ಅದು ಹಾಳಾಗುತ್ತಿದೆ ಶಿವಮೊಗ್ಗ, ಮೈಸೂರು ಬೆಂಗಳೂರು ಈ ಪಾರ್ಟಿಯನ್ನು ರಕ್ಷಣೆ ಮಾಡಿ ಅಲ್ಲಿರತಕ್ಕಂಥ ಕಾರ್ಮಿಕರಿಗೆ ಪರ್ಯಾಯ ಕೆಲಸ ಕೊಟ್ಟು ಈ ಅಗರಬತ್ತಿ ಉದ್ಯಮಕ್ಕೆ ಕೂಡ ಪ್ರೋತ್ಸಾಹ ಕೊಡುವ ಕೆಲಸವನ್ನು ಈ ಅಧಿವೇಶನದ ನಂತರ ಪ್ರಾಮಾಣಿಕವಾಗಿ ಮಾಡುತ್ತೇನೆ, ಈಗಾಗಲೆ ನಾನು ಈ ಕಡೆ ಗಮನವನ್ನು ಕೊಟ್ಟಿದ್ದೇನೆ ಇನ್ನು ಹೆಚ್ಚಿನ ಒತ್ತನ್ನು ಈ ಕಡೆಗೆ ಕೊಡುತ್ತೇನೆ ಎನ್ನುವ ಮಾತನ್ನು ಗೌರವಾನ್ವಿತ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಗಂಧ ಬೆಳೆಯುವುದಕ್ಕೆ ರಕ್ಷಣೆ ಇಲ್ಲ ಯಾರು ಕಡಿದು ಕೊಂಡು ಹೋಗುತ್ತಾರೆ, ಏನು ಮಾಡುತ್ತಾರೆ, ನಾವು ಖಾಸಗಿ ಜಮೀನಿನಲ್ಲು ಕೂಡ ಗಂಧವನ್ನು ಬೆಳೆಯುತ್ತಿದ್ದೇವೆ, ಯಾರಾದರೂ ರಾತ್ರಿ 1 ಗಂಟೆನಲ್ಲಿ ಕಟ್ ಮಾಡುಕೊಂಡು ಹೋಗಬಹುದು. ಕೇಸ್ ಪೋಲಿಸನವರಿಗೆ ಕೊಡುವುದರಿಂದ ಏನು ಉಪಯೋಗವಾಗುವುದಿಲ್ಲ, ನಾವೇ ತಾಪತ್ರಯಗಳಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ ಎಂದು ಗಂಧ ಬೆಳೆಯುವುದು ಡಿಸ್ಕರೇಜ್ ಆಗಿದೆ. ಸ್ವಲ್ಪ ಫಾರೆಸ್ಟ್ ಇಲಾಖೆಯಲ್ಲಿ ಇನ್‌ಸಿಸ್ಟ್ ಮಾಡಿ ಅವರ ಭಾಗದಲ್ಲಿ, ಮತ್ತೆ ತೆಂಗಿನಗಿಡವಿರುವ ನಮ್ಮ ಕಡೆಯಲ್ಲಿ ಅದು ಪ್ಯಾರಸೈ ಅದು, ಅದು ನಮ್ಮ

ಬೆಲೆಯಲ್ಲೆಲ್ಲಾ ಬೆಳೆದುಕೊಂಡು ಬಂದಂತಹ ಗಿಡ, ಆ ಕಡೆ ತಾವು ಸ್ವಲ್ಪ ಪ್ರೋತ್ಸಾಹ ಕೊಡಬೇಕೆಂದು ಕೇಳುತ್ತೇನೆ.

ಶ್ರೀಮತಿ ಎಂ.ಕೆ. ನಾಗಮಣಿ: ಬೇರೆ ಖಾಸಗಿ ಜಮೀನಿನಲ್ಲಿ ಬೆಳೆದಿರುವ ಗಂಧವನ್ನು ಕಟಾವು ಮಾಡುವುದಕ್ಕಿಂತ ಆ ಫ್ಯಾಕ್ಟರಿ ಆವರಣದಲ್ಲಿರುವಂತಹ ಗಂಧದ ಮರಗಳನ್ನೆ, ಯಾರು ತೆಗೆದುಕೊಂಡು ಹೋಗುತ್ತಾರೆಂದು ಇದುವರೆವಿಗೂ ಕಾರ್ಖಾನೆಯವರು ಕಂಡುಹಿಡಿದಿಲ್ಲ, ಯಾರು ಕಂಡುಹಿಡಿದಿಲ್ಲ, ಸಾಕಷ್ಟು ಆವರಣದಲ್ಲಿದ್ದಂತಹ ಮರಗಳೂ ಕಾಣೆಯಾಗಿವೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯಾ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ. ಪಿ.ಜಿ.ಆರ್. ಸಿಂಧ್ಯಾ: ನನ್ನ ಗಮನಕ್ಕೂ ಬಂದಿದೆ ಈ ಸದನದಲ್ಲಿ ಕೂಡ ಚರ್ಚೆ ಮಾಡಿದ್ದೇವೆ, ಮಂತ್ರಿಗಳ ಮನೆಯ ಆವರಣದಲ್ಲಿದ್ದಂತಹ ಗಂಧದ ಮರಗಳು ರಾತ್ರೋರಾತ್ರಿ ನಾಪತ್ತೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ, ಮಾನ್ಯ ಎಸ್. ಎಸ್. ಪಾಟೀಲ್‌ರವರು ಮಂತ್ರಿಗಳಾಗಿದ್ದಾಗ ಅವರ ವಸತಿಗೃಹದಿಂದ ಎತ್ತುಕೊಂಡು ಹೋಗಿದ್ದರು, ಇದರ ಬಗ್ಗೆ ಒಂದು ಜನರಲ್ ಆಗಿ ಅವೆರ್‌ನೆಸ್ ಬರಬೇಕಾಗುತ್ತದೆಯೆ ಹೊರತು, ರಕ್ಷಣೆ ಒದಗಿಸುತ್ತೇವೆನ್ನುವುದು ಕಷ್ಟದ ಕೆಲಸ ಪ್ರಯತ್ನ ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ: ಅದರ ಕಾನೂನನ್ನು ಬಿಗಿ ಮಾಡಬೇಕಾಗಿದೆ, ಗಂಧ ಕಳ್ಳಸಾಗಾಣಿಕೆಯಲ್ಲಿ ಸಿಕ್ಕಿ ಹಾಕಿಕೊಂಡರೆ, ಈಗ ಅದು ಬೇಲಬಲ್ ಅಫೆನ್ಸ್, ಗಂಧ ಹಿಡಿದರೆ, ನಾವೆಲ್ಲಾ ರಾತ್ರಿಯಲ್ಲಾ ನಿದ್ರೆ ಮಾಡುವಂತಿಲ್ಲ, ನಮ್ಮಲ್ಲೆಲ್ಲ ಬಹಳ ಗಂಧ ಬೆಳೆಯುವಂತಹ ಪ್ರದೇಶ.

ಅಧ್ಯಕ್ಷರು: ಈಗ ಮಂತ್ರಿಗಳು ಹೇಳಿಕೆ ಮಾಡುತ್ತಾರೆ, ಅಲ್ಲಿ 5 ಗಂಟೆಗೆ ಸಂಸದೀಯ ಪಟು ಪುಸ್ತಕ ಬಿಡುಗಡೆ ಸಮಾರಂಭವಿದೆ, ಆ ಕಾರಣದಿಂದ ವಾಟಾಳ್ ನಾಗರಾಜ್ ರವರೆ, ನಾಳೆ ಬೆಳಿಗ್ಗೆ ಮೊದಲು ನಿಮ್ಮದನ್ನೆ ತೆಗೆದುಕೊಳ್ಳೋಣ.

ಹೇಳಿಕೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಮುಂಜಾನೆ ವಿರೋಧಪಕ್ಷದ ನಾಯಕರು ಹಾಗೂ ಉಪನಾಯಕರು ಜಗದೀಶ್ ಶೆಟ್ಟರ್, ವಾಟಾಳ್ ನಾಗರಾಜ್, ಮಾಧುಸ್ವಾಮಿ, ಅರಗ ಜ್ಞಾನೇಂದ್ರ, ಜಯಪ್ರಕಾಶ್ ಹೆಗ್ಡೆ, ರಾಯರೆಡ್ಡಿಯವರು ಹೀಗೆ ಹಲವಾರು ಸದಸ್ಯರು ಈ ಕೃಷ್ಣಾ ಜಲವಿವಾದದ ಹಾಗೂ ನೀರಿನ ಬಗ್ಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿ ಕರ್ನಾಟಕ ಸರ್ಕಾರ ಬಚಾವತ್ ಅವಾರ್ಡ್ ಪ್ರಕಾರ ಏನು ನೀರನ್ನು